**ದಿನಾಂಕಃ 24–02–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

3. ನನ್ನ ಮಗಳ ಕುತ್ತಿಗೆಗೆ ನೇಣು ಬಿಗಿದಿದ್ದ ಸೀರೆಯ ತುಂಡನ್ನು ನೋಡಿದರೆ ಗುರುತಿಸಬಲ್ಲೆ. ಸೀಲು ಮಾಡಲಾಗಿರುವ ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ಒಂದು ಸೀರೆ ತುಂಡನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–1 ಎಂದು ಗುರುತಿಸಲಾಯಿತು. ನನ್ನ ಮಗಳ ದೇಹ ಮನೆಯ ಮೇಲ್ಚಾವಣಿಗೆ ನೇಣು ಬಿಗಿದಿದ್ದ ಬಗ್ಗೆ ಸೀರೆಯ ತುಂಡನ್ನು ನೋಡಿದರೆ ಗುರುತಿಸಬಲ್ಲೆ. ಸೀಲು ಮಾಡಲಾಗಿರುವ ಮತ್ತೊಂದು ಬಟ್ಟೆಯ ಚೀಲವನ್ನು ತೆರೆಯಲಾಯಿತು. ಸದರಿ ಬಟ್ಟೆಯ ಚೀಲದಲ್ಲಿರುವ ಇನ್ನೊಂದು ಸೀರೆ ತುಂಡನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮುಮಾ–2 ಎಂದು ಗುರುತಿಸಲಾಯಿತು. ನಾನು ವಿದ್ಯಾವಂತೆ ಆಗಿರುವುದಿಲ್ಲ. ನಾನು ದುಃಖದಲ್ಲಿದ್ದ ಕಾರಣ ನಾನು ದಾಖಲಿಸಿರುವ ನಿಪಿ–1 ದೂರಿಗೆ ನಾನು ನನ್ನ ಸಹಿ ಮಾಡದೆ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ನಾನು ಪೊಲೀಸರು ಮಹಜರ್ ಗೆ ಬಂದ ಕಾಲದಲ್ಲಿ ನಿಪಿ–4 ಮಹಜರಿಗೆ ನನ್ನ ಸಹಿಯನ್ನು ಮಾಡಿರುತ್ತೇನೆ. ನಿಪಿ–4 ಮಹಜರ್ ಕಾಲದಲ್ಲಿ ಹಾಜರಿದ್ದ ಸಾಕ್ಷಿದಾರರ ಹೆಸರುಗಳು ನನಗೆ ನೆನಪಿಲ್ಲ. ಆರೋಪಿಗಳು ನನ್ನ ಮಗಳಿಗೆ ವರದಕ್ಷಿಣೆ ಕಿರುಕುಳ ನೀಡುತ್ತಿದ್ದ ಕಾರಣದಿಂದ ನನ್ನ ಮಗಳ ಸಾವು ಆಗಿರುತ್ತದೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

4. ಚೈತ್ರ ನನ್ನ ಐದನೆಯ ಮಗಳು. ನನಗೆ ಒಟ್ಟು ಐದು ಜನ ಹೆಣ್ಣು ಮಕ್ಕಳು. ನಮ್ಮ ಊರಿನ ದೇವಸ್ಥಾನದಲ್ಲಿ ನನ್ನ ಮಗಳಾದ ಚೈತ್ರಳನ್ನು 1ನೇ ಆರೋಪಿ ಜಗದೀಶನಿಗೆ

ವಿವಾಹ ಮಾಡಿ ಕೊಡಲಾಗಿರುತ್ತದೆ. ಚೈತ್ರ ಹಾಗೂ ಜಗದೀಶ ಪ್ರೀತಿ ಮಾಡುತ್ತಿದ್ದು ಅವರಿಬ್ಬರೂ ಓಡಿ ಹೋಗಿ ಚೆನ್ನರಾಯಪಟ್ಟಣದ ದೇವಸ್ಥಾನದಲ್ಲಿ ವಿವಾಹ ಆಗಿರುತ್ತಾರೆಂದರೆ ಸರಿಯಲ್ಲ. ನಾನು ಚೈತ್ರ ಹಾಗೂ ಜಗದೀಶ್ ರವರ ವಿವಾಹದಲ್ಲಿ ಭಾಗಿಯಾಗಿರಲಿಲ್ಲ ಎಂದರೆ ಸರಿಯಲ್ಲ. ಚೈತ್ರ ಹಾಗೂ ಜಗದೀಶ್ ರವರ ವಿವಾಹ ಆಗುವ ಪೂರ್ವದಲ್ಲಿ ನನ್ನ ಮೂರು ಜನ ಹೆಣ್ಣುಮಕ್ಕಳ ವಿವಾಹ ಆಗಿತ್ತು. ಚೈತ್ರ ಹಾಗೂ 1ನೇ ಆರೋಪಿ ಜಗದೀಶ್ ರವರ ವಿವಾಹ ಆದ ಕಾಲದಲ್ಲಿ ನನ್ನ ಮೂರನೇ ಮಗಳಾದ ಮಮತಾ ರವರ ವಿವಾಹ ಆಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮೂರನೇ ಮಗಳಾದ ಮಮತಾ ರವರನ್ನು ಜಯರಾಂ ಎಂಬ ಯುವಕನಿಗೆ ವಿವಾಹ ಮಾಡಲಾಗಿದ್ದು ಆಕೆಯ ವಿವಾಹ ಕಾಲದಲ್ಲಿ ವರದಕ್ಷಿಣೆಯಾಗಿ 40 ಸಾವಿರ ರೂ. ಹಣವನ್ನು ನೀಡಲಾಗಿರುತ್ತದೆ. ನನ್ನ ಮಗಳಾದ ಮಮತಾ ರವರ ವಿವಾಹ ಮಾಡುವ ಕಾಲದಲ್ಲಿ ನನ್ನ ಗಂಡನ ಜಮೀನನ್ನು ಅಡಮಾನ ಮಾಡಲಾಗಿತ್ತು ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಜಮೀನನ್ನು ಒಂದು ಲಕ್ಷ ರೂ.ಗೆ ನಮ್ಮ ಊರಿನಲ್ಲಿ ಅಡಮಾನ ಇಟ್ಟಿದ್ದು 1ನೇ ಆರೋಪಿತ ಸದರಿ ಸಾಲವನ್ನು ತೀರಿಸಿರುತ್ತಾನೆಂದರೆ ಸರಿಯಲ್ಲ. ನನ್ನ ಮಗಳಾದ ಮಮತಾ ರವರ ವಿವಾಹ ಆದ ನಂತರ ನನ್ನ ಇನ್ನೊಬ್ಬ ಮಗಳಾದ ಸುಧಾರವರ ವಿವಾಹ ಆಗಿರುತ್ತದೆ. ಸುಧಾರವರ ವಿವಾಹವನ್ನು ನಮ್ಮ ಮನೆಯ ಬಳಿಯೇ ಮಾಡಲಾಗಿರುತ್ತದೆ. ನನ್ನ ಮಗಳಾದ ಸುಧಾರವರ ವಿವಾಹ ಮಾಡಲು 7 ಲಕ್ಷ ರೂ. ಖರ್ಚು ಮಾಡಿರುತ್ತೇವೆ. ನನ್ನ ಮಗಳಾದ ಮಮತಾ ರವರ ವಿವಾಹ ಮಾಡಲು ಸಹ 5-6 ಲಕ್ಷ ರೂ. ಹಣ ಖರ್ಚಾಗಿರುತ್ತದೆ. ನನನ ಮಗಳಾದ ಸುಧಾರವರ ವಿವಾಹ ಕಾಲದಲ್ಲಿ ನನ್ನ ಅಳಿಯ ಜಯರಾಂಗೆ 40 ಸಾವಿರ ರೂ. ಹಣ ಹಾಗೂ 7 ತೊಲ ಬಂಗಾರವನ್ನು ವರದಕ್ಷಿಣೆಯಾಗಿ ನೀಡಲಾಗಿರುತ್ತದೆ. ನನ್ನ ಮಗಳಾದ

ಸುಧಾರವರ ವಿವಾಹ ಮಾಡಲು ಸಹ ನಾನು ಸ್ವಲ್ಪ ಹಣವನ್ನು ಸಾಲ ಮಾಡಿದ್ದೆ ಎಂದರೆ ಸರಿ. ಆ ಸಾಲವನ್ನು ಸಹ ತೀರಿಸಲು 1ನೇ ಆರೋಪಿ ಜಗದೀಶ್ ನನಗೆ ಒಂದೂವರೆ ಲಕ್ಷ ರೂ. ಹಣವನ್ನು ನಗದಾಗಿ ನೀಡಿರುತ್ತಾನೆ ಎಂದರೆ ಸರಿಯಲ್ಲ.

5. 1ನೇ ಆರೋಪಿ ಜಗದೀಶ್ ಆತನ ಯಾವುದೇ ಕಾರನ್ನು ನನ್ನ ಮನೆಯ ಬಳಿ ನಿಲ್ಲಿಸಿರಲಿಲ್ಲ. ನನ್ನ ಮಗಳಾದ ಮಮತಾ ರವರ ಗಂಡ 1ನೇ ಆರೋಪಿ ಜಗದೀಶ್ ಗೆ ಸೇರಿದ ಕಾರನ್ನು ಈಗ ಬಳಸುತ್ತಿದ್ದಾನೆಂದರೆ ಸರಿಯಲ್ಲ. ನನ್ನ ಮಗಳಾದ ಮಮತಾ ರವರ ಗಂಡ ಯಾವುದೇ ಕಾಲದಲ್ಲಿ 1ನೇ ಆರೋಪಿ ಜಗದೀಶ್ ಗೆ ಸೇರಿದ ಕಾರನ್ನು ಬಳಸುತ್ತಿರಲಿಲ್ಲ.

6. 3ನೇ ಆರೋಪಿ ಪುಟ್ಟೇಗೌಡ ನನ್ನ ಸ್ವಂತ ಅಣ್ಣ ಎಂದರೆ ಸರಿ. ನನ್ನ ಅಣ್ಣ ಪುಟ್ಟೇಗೌಡ ಈಗ ಜೀವಂತವಾಗಿಲ್ಲ. ನನ್ನ ಅಣ್ಣ ಪುಟ್ಟೇಗೌಡ ಯಾವಾಗ ಮೃತಪಟ್ಟ ಎಂದು ನನಗೆ ತಿಳಿದಿಲ್ಲ. ನಾನು ನನ್ನ ಅಣ್ಣ ಪುಟ್ಟೇಗೌಡನ ಮೇಲೆ ಪೊಲೀಸರಲ್ಲಿ ದೂರು ದಾಖಲಿಸಿದ ಕಾರಣದಿಂದ ನನ್ನ ಅಣ್ಣ ಪುಟ್ಟೇಗೌಡ ತನ್ನ ತಂಗಿ ತನ್ನ ಮೇಲೆ ಸುಳ್ಳು ದೂರನ್ನು ದಾಖಲಿಸಿರುತ್ತಾಳೆ ಎಂದು ಮನನೊಂದು ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡರು ಎಂದರೆ ನನಗೆ ತಿಳಿದಿಲ್ಲ. ನಾನು ದೂರು ದಾಖಲಿಸಿದ ಎರಡು ದಿನಗಳಲ್ಲಿಯೇ ನನ್ನ ಅಣ್ಣ ಪುಟ್ಟೇಗೌಡರು ಆತ್ಮಹತ್ಯೆ ಮಾಡಿಕೊಂಡರು ಎಂದರೆ ನನಗೆ ತಿಳಿದಿಲ್ಲ.

7. ನಾನು ಫೋನ್ ಬಳಸುವುದಿಲ್ಲ ಎಂದರೆ ಸರಿ. ಮಳೆ ಬಂದು ನಮ್ಮ ಮನೆಯ ಕೊಟ್ಟಿಗೆ ಬಿದ್ದು ಹೋಗಿತ್ತು ಎಂದರೆ ಸರಿಯಲ್ಲ ನಾವೇ ಕೊಟ್ಟಿಗೆಯನ್ನು ಕೆಡವಿ ಹಾಕಿರುತ್ತೇವೆ. ನಮ್ಮ ಕೊಟ್ಟಿಗೆಯನ್ನು ರಿಪೇರಿ ಮಾಡಿಸಲು ಸಹ 1ನೇ ಆರೋಪಿ ಜಗದೀಶ್ ನಮಗೆ 40 ಸಾವಿರ ರೂ. ಹಣವನ್ನು ನೀಡಿದ್ದ ಎಂದರೆ ಸರಿಯಲ್ಲ. ನಮಗೆ ಮೂರು ಎಕರೆ

ಜಮೀನು ಇರುತ್ತದೆ. 1ನೇ ಆರೋಪಿ ಜಗದೀಶ್ ಹಾಗೂ ನನ್ನ ಮಗಳು ಚೈತ್ರ ಪ್ರೀತಿಸಿ ಮದುವೆ ಆಗಿದ್ದು ನನಗೆ, ನನ್ನ ಗಂಡನಿಗೆ, ನನ್ನ ಎಲ್ಲಾ ಮಕ್ಕಳಿಗೆ, ನನ್ನ ಅಳಿಯಂದಿರಿಗೆ ಸಹ ಇಷ್ಟ ಇರಲಿಲ್ಲ ಎಂದರೆ ಸರಿ. ನನ್ನ ಮಗಳಾದ ಚೈತ್ರ ಹಾಗೂ 1ನೇ ಆರೋಪಿ ಜಗದೀಶ್ ರವರ ವಿವಾಹಕ್ಕೆ ನನ್ನ ಗಂಡ, ನನ್ನ ಎಲ್ಲಾ ಹೆಣ್ಣುಮಕ್ಕಳು ಹಾಗೂ ಅಳಿಯಂದಿರು ಹೋಗಿರಲಿಲ್ಲ ಎಂದರೆ ಸರಿ.

8. 2ನೇ ಆರೋಪಿ ರಂಗಸ್ವಾಮಿ 1ನೇ ಆರೋಪಿ ಜಗದೀಶನ ಅಣ್ಣ ಎಂದರೆ ಸರಿ. 2ನೇ ಆರೋಪಿ ರಂಗಸ್ವಾಮಿ ವಿವಾಹವಾಗಿ ಬೇರೆ ಇರುತ್ತಾನೆಂದರೆ ನನಗೆ ತಿಳಿದಿಲ್ಲ. ನನ್ನ ಮಗಳಾದ ಚೈತ್ರ ರವರ ಸಾವು ಆದಾಗ 2ನೇ ಆರೋಪಿ ರಂಗಸ್ವಾಮಿ ಆಂಧ್ರದಲ್ಲಿ ವಾಸವಿದ್ದು ಬೇಕರಿ ನಡೆಸುತ್ತಿದ್ದ ಎಂದರೆ ಸರಿ. 1ನೇ ಆರೋಪಿ ಜಗದೀಶ್ ಸಹ ಆಂಧ್ರದಲ್ಲಿ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಚೈತ್ರ ಮೃತಪಡುವ 15 ದಿನಗಳ ಮೊದಲು ನಮ್ಮ ಮನೆಗೆ ಬಂದಿದ್ದಳು. ವಿವಾಹವಾದ ನಂತರ ಚೈತ್ರ ವರ್ಷಕ್ಕೊಮ್ಮೆ ನಮ್ಮ ಮನೆಗೆ ಬರುತ್ತಿದ್ದಳು. ನನ್ನ ಮಗಳಾದ ಚೈತ್ರಳಿಗೆ ಅಸ್ತಮಾದ ಕಾಯಿಲೆ ಇತ್ತು ಎಂದರೆ ಸರಿಯಲ್ಲ. 1ನೇ ಆರೋಪಿ ಜಗದೀಶ್ ತನಗೆ ಕಷ್ಟ ಇದೆ ಎಂದು ಕೇಳಿ ಬಂದಾಗ ನಾವು ಒಂದು ಲಕ್ಷ ರೂ. ಹಣವನ್ನು ಆತನಿಗೆ ನೀಡಿರುತ್ತೇವೆ. ನಾನು ಅವಿದ್ಯಾವಂತೆಯಾದ ಕಾರಣ 1ನೇ ಆರೋಪಿ ಜಗದೀಶನಿಗೆ ಯಾವ ದಿನಾಂಕದಂದು, ಯಾವ ದಿನದಂದು ಹಣ ನೀಡಲಾಗಿರುತ್ತದೆ ಎಂದು ತಿಳಿದಿಲ್ಲ. ನಾವು 1ನೇ ಆರೋಪಿ ಜಗದೀಶನಿಗೆ ನಗದಾಗಿ ಹಣವನ್ನು ನೀಡಿರುತ್ತೇವೆ. ನನ್ನ ಮಗಳು ಚೈತ್ರ ಹಬ್ಬಕ್ಕಿಂತ ಮೊದಲು ಒಮ್ಮೆ ಬಂದಿದ್ದ ಕಾಲದಲ್ಲಿ ಆಕೆಗೆ ಆರೋಪಿಗಳು ವರದಕ್ಷಿಣೆ ಬಾಬ್ತು ಕಿರುಕುಳ ನೀಡುತ್ತಿದ್ದ ಬಗ್ಗೆ ತಿಳಿಸಿದ್ದಳು. ಚೈತ್ರ ಆಕೆಗೆ ಆರೋಪಿಗಳು ಕಿರುಕುಳ ನೀಡುತ್ತಿದ್ದಾರೆ ಎಂದು ತಿಳಿಸಿದಾಗ ನಾವು

ಆರೋಪಿಗಳ ವಿರುದ್ಧ ಪೊಲೀಸರಲ್ಲಿ ಯಾವುದೇ ದೂರು ದಾಖಲಿಸುವ ಪ್ರಯತ್ನ ಮಾಡಿರುವುದಿಲ್ಲ. 1ನೇ ಆರೋಪಿ ಜಗದೀಶನಿಗೆ ಒಂದು ಲಕ್ಷ ರೂ. ಹಣವನ್ನು ನನ್ನ ಗಂಡ ನೀಡಿರುತ್ತಾರೆ. ನನ್ನ ಗಂಡ 1ನೇ ಆರೋಪಿ ಜಗದೀಶನಿಗೆ ಹಣ ನೀಡಿದಾಗ ನಾನು ಮತ್ತು ನನ್ನ ಗಂಡ ಮಾತ್ರ ಇದ್ದೆವು. ನನ್ನ ಗಂಡನನ್ನು ಹೊರತುಪಡಿಸಿ 1ನೇ ಆರೋಪಿಗೆ ಬೇರೆ ಯಾರೂ ಹಣ ನೀಡಿಲ್ಲ. ಈ ಬಗ್ಗೆ ನಾನು ಎಲ್ಲೂ ತಿಳಿಸಿಲ್ಲ.

9. ಅಮವಾಸ್ಯೆಯ ಹಬ್ಬದ ದಿನ ನನ್ನ ಮಗಳು ಚೈತ್ರ ಆರೋಪಿಗಳ ಊರಾದ ಲಿಂಗಪ್ಪನಕೊಪ್ಪಲು ಗ್ರಾಮಕ್ಕೆ ಅವರ ಮನೆಗೆ ಹೋಗಿದ್ದಳು. ಊರಿಗೆ ಹಬ್ಬ ಮಾಡಲು ಬರುವಂತೆ 2ನೇ ಆರೋಪಿ ರಂಗಸ್ವಾಮಿ ನನ್ನ ಮಗಳಾದ ಚೈತ್ರಳನ್ನು ಕರೆಸಿರುತ್ತಾನೆ. ನನ್ನ ಮಗಳು ಆರೋಪಿಗಳ ಮನೆಗೆ ಹೋದ ಕಾಲದಲ್ಲಿ ಆರೋಪಿಗಳು ಆಕೆಗೆ ಹಬ್ಬ ಮಾಡಲು ಬಿಡದೆ ಜಗಳ ತೆಗೆದು ಹೊಡೆದಿರುತ್ತಾರೆ. ಆರೋಪಿಗಳು ಆಕೆಗೆ ಕಿರುಕುಳ ನೀಡಿರುವ ಚೈತ್ರಳು ನನ್ನ ಇನ್ನೊಬ್ಬ ಮಗಳಾದ ಚೇತುರವರಿಗೆ ತಿಳಿಸಿರುತ್ತಾಳೆ. ಈ ಬಗ್ಗೆ ತೇಜು ನನಗೆ ತಿಳಿಸಿರುತ್ತಾಳೆ, ಚೈತ್ರ ತಿಳಿಸಿಲ್ಲ. ಆರೋಪಿಗಳು ಅವರ ಊರಿಗೆ ಹಬ್ಬ ಮಾಡಲು ಚೈತ್ರಳನ್ನು ಕರೆದು ಹಬ್ಬ ಮಾಡಲು ಆಕೆಗೆ ಬಿಡಲಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಹಬ್ಬ ಆದ ಮರುದಿನ 6.30 ಗಂಟೆ ಸಮಯಕ್ಕೆ 1ನೇ ಆರೋಪಿ ಜಗದೀಶ್ ನನಗೆ ಫೋನ್ ಮಾಡಿ ನನ್ನ ಮಗಳು ಚೈತ್ರ ಮೃತಪಟ್ಟಿರುವ ಬಗ್ಗೆ ತಿಳಿಸಿರುತ್ತಾನೆ. ನನ್ನ ಬಳಿ ಫೋನ್ ಇರದ ಕಾರಣ 1ನೇ ಆರೋಪಿ ಜಗದೀಶ್ ನನಗೆ ಫೋನ್ ಮಾಡಿ ತಿಳಿಸಿದ ಎನ್ನುವ ಬಗ್ಗೆ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಿಷಯ ತಿಳಿದ ನಾನು ಹಾಗೂ ನನ್ನ ಹೆಣ್ಣುಮಕ್ಕಳು ಬೆಳಿಗ್ಗೆ 8 ಗಂಟೆ ಸಮಯಕ್ಕೆ ನನ್ನ ಮಗಳು ಮೃತಪಟ್ಟಿದ್ದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ನನ್ನ ಮಗಳು ಚೈತ್ರ ಮೃತಪಟ್ಟಿದ್ದಳು

ಎಂದರೆ ಸರಿ. ನಾವು ಸ್ಥಳಕ್ಕೆ ಹೋಗುವಷ್ಟರಲ್ಲಿ ಚೈತ್ರರವರ ಮೃತದೇಹವನ್ನು ನೇಣಿನಿಂದ ಇಳಿಸಿ ಆಸ್ಪತ್ರೆಗೆ ಸಾಗಿಸಲಾಗಿತ್ತು ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದಾಗ ನಮ್ಮ ಮಗಳಾದ ಚೈತ್ರಳ ಮೃತದೇಹವನ್ನು ಇನ್ನೂ ನೇಣಿನಿಂದ ಇಳಿಸಿರಲಿಲ್ಲ. ನಾವು ಹೋದ ನಂತರ ಪೊಲೀಸರು ಸ್ಥಳಕ್ಕೆ ಬಂದು ನೇಣಿನಿಂದ ನನ್ನ ಮಗಳ ಮೃತದೇಹವನ್ನು ಇಳಿಸಿರುತ್ತಾರೆ. ನಾನು ಹಾಗೂ ನನ್ನ ಮಗಳು ತೇಜುರವರು ಮಧ್ಯಾಹ್ನ 12 ಗಂಟೆ ಸಮಯಕ್ಕೆ ಆಸ್ಪತ್ರೆಗೆ ಹೋಗಿ ನನನ ಮಗಳಾದ ಚೈತ್ರಳ ಮೃತದೇಹವನ್ನು ನೋಡಿರುತ್ತೇವೆಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ಮಗಳು ತೇಜು ಆಸ್ಪತ್ರೆಗೆ ಬಂದಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಮಮತಾ ಹಾಗೂ ಆಕೆಯ ಗಂಡ ಮಧ್ಯಾಹ್ನ 12.30 ಗಂಟೆಗೆ ಆಸ್ಪತ್ರೆಗೆ ಬಂದಿರುತ್ತಾರೆಂದರೆ ಸರಿಯಲ್ಲ.

10. ನಾನು ಹಾಜರುಪಡಿಸಿರುವ ನನ್ನ ಮಗಳು ಚೈತ್ರ ಹಾಗೂ 1ನೇ ಆರೋಪಿ ಜಗದೀಶ್ ರವರ ವಿವಾಹದ ಫೋಟೋಗಳು ನಾವು ತೆಗೆಸಿದ ಫೋಟೋಗಳು ಆಗಿರದೆ ಅದು 1ನೇ ಆರೋಪಿ ಜಗದೀಶನ ಮನೆಯಲ್ಲಿದ್ದ ಫೋಟೋಗಳು ಆಗಿರುತ್ತವೆಂದರೆ ಸರಿಯಲ್ಲ. ಮುಮಾ–1 ಹಾಗೂ 2 ಸೀರೆಯ ತುಂಡುಗಳು ಹೊಸ ಸೀರೆಯ ತುಂಡುಗಳು ಎಂದರೆ ಸರಿಯಲ್ಲ. ಮುಮಾ–1 ಹಾಗೂ 2ರ ಮೇಲೆ ಯಾವುದೇ ಕಲೆಗಳು ಇಲ್ಲ ಎಂದರೆ ನಾನು ನೋಡಿಲ್ಲ. ಮುಮಾ–1 ಹಾಗೂ 2 ಸೀರೆಯ ತುಂಡುಗಳು ಚೈತ್ರ ನೇಣು ಬಿಗಿದುಕೊಳ್ಳಲು ಬಳಸಿದ ಸೀರೆಯ ತುಂಡುಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದುರುದ್ದೇಶಪೂರ್ವಕವಾಗಿ ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲ್ಮಾಡಲಾಗಿದೆ ಎಂದರೆ ಸರಿಯಲ್ಲ. ಮೃತ ಚೈತ್ರ ಯಾವುದಾದರೂ ಡೆತ್ ನೋಟನ್ನು ಬರೆದು ಇಟ್ಟಿದ್ದಳೋ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿದಾರರು ಹೌದು ಚೈತ್ರ ಆಕೆಯ ಸಾವಿನ ಕಾರಣದ ಬಗ್ಗೆ ಡೆತ್

ನೋಟನ್ನು ಬರೆದು ಇಟ್ಟಿದ್ದಳು ಅದನ್ನು ಮಹಜರ್ ಗೆ ಬಂದ ಪೊಲೀಸರಿಗೆ ನಾವು ತೋರಿಸಿ ನೀಡಿರುತ್ತೇವೆ ಪೊಲೀಸರು ಸದರಿ ಡೆತ್ ನೋಟನ್ನು ಪಡೆದುಕೊಂಡರು ಆದರೆ ಅದರ ಪ್ರತಿಯನ್ನು ಸಹ ನಮಗೆ ನೀಡಲಿಲ್ಲ ಎಂದು ಉತ್ತರಿಸಿರುತ್ತಾರೆ. ಚೈತ್ರ ಆಕೆಯ ಸಾವಿಗೆ ಸಂಬಂಧಿಸಿದಂತೆ ಯಾವುದೇ ಡೆತ್ ನೋಟನ್ನು ಬರೆದಿರಲಿಲ್ಲ ಎಂದರೆ ಸರಿಯಲ್ಲ.

11. ನಾನು ಚೈತ್ರಳನ್ನು ಒಂದು ಬಾರಿಯೂ ಹೊಳೇನರಸೀಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಿರಲಿಲ್ಲ. ಚೈತ್ರಳಿಗೆ ಯಾವುದೇ ಕಾಯಿಲೆ ಇಲ್ಲದ ಕಾರಣ ಆಕೆ ಸಹ ಯಾವುದೇ ಆಸ್ಪತ್ರೆಗೆ ಹೋಗಿರಲಿಲ್ಲ. ಚೈತ್ರಳಿಗೆ ವಾಸಿಯಾಗದ ಉಬ್ಬಸದ ಕಾಯಿಲೆ ಇದ್ದು ಅದಕ್ಕೆ ಆಕೆ ಚಿಕಿತ್ಸೆ ಪಡೆಯುತ್ತಿದ್ದು ಆಕೆಯ ಕಾಯಿಲೆ ವಾಸಿಯಾಗದ ಕಾರಣದಿಂದ ಮನನೊಂದು ಚೈತ್ರ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆಂದರೆ ಸರಿಯಲ್ಲ. ನಾನು ಆರೋಪಿಗಳ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.